# 07.07.2024

## ಪ್ರದೇಶ ಸಮಾಚಾರ

### ಓದಿದವರು: ವಿವೇಕಾದಿತ್ಯ ಕನಿಯಾಲ

<><><>

**ಮುಖ್ಯಾಂಶಗಳು:**

- **ಕಳಸಾ–ಬಂಡೂರಿ ತಿರುವು ಯೋಜನೆ;** ಕೇಂದ್ರದ 'ಪ್ರವಾಹ್' ತಂಡ, ಇಂದು ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ.
- **ಮಹಾದಾಯಿ 'ಪ್ರವಾಹ್' ಅಧ್ಯಯನ ಸಮಿತಿಯ,** ಯೋಜನಾ ಪ್ರದೇಶದ ಭೇಟಿಗೆ, ಅನ್ಯಾರ್ಥ ಕಲ್ಪಿಸುವುದು, ಬೇಡ – ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ.
- **ಸಂಪೂರ್ಣತಾ ಅಭಿಯಾನ;** ಬೀದರ ಜಿಲ್ಲೆಯ ನಾಲ್ಕು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಅರ್ಹ ಫಲಾನುಭವಿ ಆಯ್ಕೆ ಆರಂಭ.
- **ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ,** ಖಾಸಗಿ ಹೂಡಿಕೆಗೂ, ಅವಕಾಶ – ಸಚಿವ ದಿನೇಶ್ ಗುಂಡೂರಾವ್.

<><><>

**ಈಗ ವಾರ್ತೆಗಳ ವಿವರ**

<><><>

**ಕಳಸಾ–ಬಂಡೂರಿ ತಿರುವು ಯೋಜನೆ ಪರಿಶೀಲಿಸಲು,** ಕೇಂದ್ರ ಸರ್ಕಾರ ರಚಿಸಿದ, 'ಪ್ರವಾಹ್' (Progressive River Authority For Water and Harmony) ತಂಡ, ಇಂದು ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ ನೀಡುತ್ತಿದೆ.

ಈ ಯೋಜನೆ ಅನುಷ್ಠಾನಗೊಳಿಸಲು, ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ಏಳು ಗ್ರಾಮಗಳ ಅರಣ್ಯ ಭೂಮಿ ಬಳಸಿಕೊಂಡು, ಜಾಕ್‌ವೆಲ್ ನಿರ್ಮಾಣ, ಪಂಪ್‌ಹೌಸ್, ಪೈಪ್‌ಲೈನ್ ಅಳವಡಿಸಲು, ಒಪ್ಪಿಗೆ ನೀಡುವಂತೆ ಕೋರಿ, ರಾಜ್ಯ ಸರ್ಕಾರ ಕೇಂದ್ರ ಪರಿಸರ ಸಚಿವಾಲಯಕ್ಕೆ ಈ ವರ್ಷದ ಜನವರಿಯಲ್ಲಿ ಪ್ರಸ್ತಾವ ಸಲ್ಲಿಸಿತ್ತು.

ಮಹಾದಾಯಿ ನ್ಯಾಯ ಮಂಡಳಿ, ಕಳೆದ 2018ರ ಆಗಸ್ಟ್ 14 ರಂದು 3 ದಶಾಂಶ 9–0 ಟಿ.ಎಂ.ಸಿ. ಅಡಿ ನೀರಿನ ಹಂಚಿಕೆ ಮಾಡಿತ್ತು. ಈ ಯೋಜನೆ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ, ಕೇಂದ್ರ ಜಲ ಆಯೋಗ, ಕಳೆದ 2022ರ ಡಿಸೆಂಬರ್ 29 ರಂದು ಅನುಮೋದನೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ, 1 ದಶಾಂಶ 7–8 ಟಿ.ಎಂ.ಸಿ. ಅಡಿ ನೀರಿ ಮೀಸಲಿಡಲಾಗಿದೆ.

**ಮಹಾದಾಯಿ 'ಪ್ರವಾಹ್' ಅಧ್ಯಯನ ಸಮಿತಿ,** ಯೋಜನಾ ಪ್ರದೇಶಕ್ಕೆ ಇಂದು ಭೇಟಿ ನೀಡಿ, ಪರಿಶೀಲಿಸಲಿದೆ. ಮಹಾದಾಯಿ ಯೋಜನೆಗೂ, ಪ್ರಾಧಿಕಾರ ಪ್ರತ್ಯೇಕ ಸಮಿತಿ ನೇಮಕ ಮಾಡಿದೆ. ಅಧಿಕೃತ ಭೇಟಿ ಇದಾಗಿದ್ದು, ಬೇರೆ ಅರ್ಥ ಕಲ್ಪಿಸಬಾರದು ಎಂದು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ, ಇಂಧನ ಮೂಲಗಳ ಸಚಿವ ಪ್ರಲ್ಹಾದ್ ಜೋಶಿ, ತಿಳಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮಹಾದಾಯಿ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಸರ್ಕಾರ ಅನುಮತಿಸಿದೆ. 52 ಹೆಕ್ಟರ್ ಪ್ರದೇಶದ ದಟ್ಟ ಅರಣ್ಯದಲ್ಲಿ ಯೋಜನೆ ಕೈಗೊಳ್ಳಲು ಅನುಮತಿ ಕೇಳಲಾಗಿದೆ. ವನ್ಯಜೀವಿ ಮಂಡಳಿ ಅನುಮತಿಗಾಗಿ, ಕಾಯಲಾಗುತ್ತಿದೆ ಎಂದರು.

<><><>

**ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಧ್ವನಿ ಸೆಕೆಂದುಗಳು**

<><><>

**ರಾಜ್ಯದಲ್ಲಿ ಪ್ರಥಮ ಬಾರಿಗೆ,** ಬಳ್ಳಾರಿ ಜಿಲ್ಲಾಡಳಿತ, ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆ ಅಡಿ, ಜಿಲ್ಲೆಯ ಎಲ್ಲ ಅಂಗನವಾಡಿ ಕೇಂದ್ರಗಳಿಗೆ, ರೆಫ್ರಿಜರೇಟರ್ ವಿತರಿಸುತ್ತಿರುವುದು ಶ್ಲಾಘನೀಯ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಬಳ್ಳಾರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 7 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸಲಾಗುವುದು. ತನ್ಮೂಲಕ, ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಕೌಶಲಾಭಿವೃದ್ಧಿ ತರಬೇತಿಗೆ, ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

**ರಾಷ್ಟ್ರೀಯ ಪು ್ಪ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವಂತೆ,** ಲೋಕಸಭೆಯ ನಿಯಮ 377 ರ ಅಡಿ, ಕೇಂದ್ರಕ್ಕೆ ಮನವಿ ಮಾಡಲಾಗಿದೆ ಎಂದು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾಕ್ಟರ್ ಕೆ.ಸುಧಾಕರ್ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರದ ತಮ್ಮ ಗೃಹ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ 2022–23 ನೇ ಸಾಲಿನ ಆರ್ಥಿಕ ವ ರ್ದಲ್ಲಿ, ಪು ್ಪೋದ್ಯಮದ ರಫ್ತು ವಹಿವಾಟು, ಸುಮಾರು 800 ಕೋಟಿ ರೂಪಾಯಿಗಳಿಗೂ ಹೆಚ್ಚಾಗಿದೆ. ದೇಶದ ಪುಷ್ಪೋದ್ಯಮಕ್ಕೆ ಕರ್ನಾಟಕ ರಾಜ್ಯದಿಂದಲೇ ಅತಿ ಹೆಚ್ಚು ಕೊಡುಗೆ ಇದೆ ಎಂದರು.

**ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದಲ್ಲಿ, ಸದ್ಗುರು** ಶ್ರೀ ಸಿದ್ಧಾರೂಢ ಸ್ವಾಮೀಜಿ ಅವರ ಅಂಚೆ ಚೀಟಿಯನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅನಾವರಣಗೊಳಿಸಿದರು.

ಶ್ರೀ ಸಿದ್ಧಾರೂಢರು ನಡೆದಾಡಿದ ಪವಿತ್ರ ಭೂಮಿ ಹುಬ್ಬಳ್ಳಿ. ದೇಶದೆಲ್ಲೆಡೆ ಶ್ರೀ ಸಿದ್ಧಾರೂಢರ ಊರು ಎಂಬ ಖ್ಯಾತಿಗೆ ಪಾತ್ರವಾಗಿದೆ ಎಂದು, ಸಂಸದ ಜೋಶಿ ನುಡಿದರು.

**ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ್** ಮಾತನಾಡಿ, ಶ್ರೀ ಮಠದಲ್ಲಿ ಯಾತ್ರಿ ನಿವಾಸ ನಿರ್ಮಿಸಲು ಸದ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದರು.

**ಸಂಸದ ಬಸವರಾಜ್ ಬೊಮ್ಮಾಯಿ ಮಾತನಾಡಿ,** ಶ್ರೀ ಸಿದ್ಧಾರೂಢರ ಚಿಂತನೆಗಳು ಎಲ್ಲ ಧರ್ಮದ ಚೌಕಟ್ಟಿನಿಂದ ಹೊರಗಿವೆ. ಆತ್ಮ ಮತ್ತು ಪರಮಾತ್ಮ ಎರಡೂ ಒಂದೇ ಎಂದು ಸಾರಿದ ಮಹಾನುಭಾವರು ಎಂದರು.

**ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ,** ಅಧ್ಯಕ್ಷತೆ ವಹಿಸಿದ್ದರು. ಕನಾಟಕ ವಲಯದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್ ಪಾಲ್ಗೊಂಡಿದ್ದರು.

**ಇಂಚಲದ ಸಾಧು ಸಂಸ್ಥಾನ ಮಠದ** ಡಾಕ್ಟರ್ ಶಿವಾನಂದ ಭಾರತಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

**ಕೇಂದ್ರ ನೀತಿ ಆಯೋಗದ, ಸಂಪೂರ್ಣತಾ ಅಭಿಯಾನದಡಿ,** ಬೀದರ ಜಿಲ್ಲೆಯ ಔರಾದ, ಕಮಲನಗರ, ಹುಮನಾಬಾದ ಹಾಗೂ ಚಿಟಗುಪ್ಪಗಳನ್ನು, ಮಹತ್ವಾಕಾಂಕ್ಷಿ ತಾಲೂಕುಗಳೆಂದು ಗುರುತಿಸಲಾಗಿದೆ.

ಬೀದರ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ, ಸಂಪೂರ್ಣತಾ ಅಭಯಾನ ಉತ್ಸವವನ್ನು, ಹೊಸ ದಿಲ್ಲಿಯ ನೀತಿ ಆಯೋಗದ ಮುಖ್ಯ ಯೋಜನಾಧಿಕಾರಿ, ಕಿಶೋರಕುಮಾರ್ ದುಬೆ ಉದ್ಘಾಟಿಸಿದರು.

ನೀತಿ ಆಯೋಗದ ಹಿರಿಯ ಲೆಕ್ಕಾಧಿಕಾರಿ ಶಶಿ ಸರ್ಕಾರ, ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಜಿಲ್ಲಾ ಸಾಂಖ್ಯಿಕ ಅಧಿಕಾರಿ ಸುವರ್ಣಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 89 ಸೂಚ್ಯಾಂಕಗಳನ್ನು ಆಧಾರವಾಗಿಟ್ಟುಕೊಂಡು, ಈ ಯೋಜನೆಗೆ ಚಾಲನೆ ನೀಡಿದ್ದಾರೆ ಎಂದರು.

<><><>

**ಸುಸ್ಥಿರ ಅಭಿವೃದ್ಧಿ ಸಾಧನೆ ನಿಟ್ಟಿನಲ್ಲಿ,** ಕೇಂದ್ರ ನೀತಿ ಆಯೋಗ ದೇಶಾದ್ಯಂತ 90 ದಿನಗಳ ಕಾಲ ಆಯೋಜಿಸಿರುವ, ಸಂಪೂರ್ಣತಾ ಅಭಿಯಾನಕ್ಕೆ, ಉತ್ತರಕನ್ನಡ ಜಿಲ್ಲೆಯ ಆಶಯ ತಾಲೂಕು ಮುಂಡಗೋಡದಲ್ಲಿ, ಚಾಲನೆ ನೀಡಲಾಗಿದೆ.

ಹೊಸ ದಿಲ್ಲಿಯ ನೀತಿ ಆಯೋಗದ ಉಪ ವಿಭಾಗಾಧಿಕಾರಿ ರಿ  ̈ಭ್ ಜೈನ್ ಅಭಿಯಾನಕ್ಕೆ ಚಾಲನೆ ನೀಡಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ವಿನೋದ ಅಣ್ವೇಕರ್ ಪಾಲ್ಗೊಂಡಿದ್ದರು.

**ಗೋವಾ ಮತ್ತು ಕೇರಳ ರಾಜ್ಯದಂತೆ,** ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ ಪ್ರವಾಸೋದ್ಯಮ ಅಭಿವೃದ್ಧಿಗೆ, ಪೂರಕ ಅವಕಾಶಗಳಿವೆ ಎಂದು, ದಕ್ಷಿಣಕನ್ನಡ ಜಿಲ್ಲೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ದಕ್ಷಿಣಕನ್ನಡ ಸೇರಿದಂತೆ, ಕರಾವಳಿ ಕರ್ನಾಟಕದಲ್ಲಿ ಪ್ರವಾಸಿಗರನ್ನು ಸರ್ವ ಋತುವಿನಲ್ಲಿಯೂ ಆಕರ್ಷಿಸಲು, ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಉತ್ಸವಗಳ ಮಾಹಿತಿಗಳನ್ನೊಳಗೊಂಡ 'ಈವೆಂಟ್ ಕ್ಯಾಲೆಂಡರ್'ನ್ನು, ಮಂಗಳೂರಿನಲ್ಲಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ, ಖಾಸಗಿ ಸಹಭಾಗಿತ್ವದ ಹೂಡಿಕೆಗಳಿಗೂ, ಸರ್ಕಾರ ಅವಕಾಶ ನೀಡಲಿದೆ ಎಂದರು.

**ಉತ್ತರಕನ್ನಡ ಜಿಲ್ಲೆಯ,** ಕಾಳಿ, ಗಂಗಾವಳಿ, ಅಘನಾಶಿನಿ ಹಾಗೂ ಶರಾವತಿ ನದಿಗಳು, ಸತತ ಮಳೆಗೆ ಮೈದುಂಬಿ ಹರಿಯುತ್ತಿವೆ.

ಪ್ರಮುಖ ಜಲಾಶಯಗಳಾದ ಕದ್ರಾ, ಕೊಡಸಳ್ಳಿ, ಸೂಪಾ, ಗೇರುಸೊಪ್ಪ, ಲಿಂಗನಮಕ್ಕಿ, ತಟ್ಟಿಹಳ್ಳ ಹಾಗೂ ಬೊಮ್ಮನಹಳ್ಳಿ ಜಲಾಶಯಗಳಿಗೆ, ನೀರಿನ ಒಳ ಹರಿವಿನ ಪ್ರಮಾಣ ಸಹ ಹೆಚ್ಚಿದೆ.

<><><>

**ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ,** ಚಿಕ್ಕನಕೋಡ ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಕಾಳಜಿ ಕೇಂದ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳು ವೈದ್ಯ ಭೇಟಿ ನೀಡಿ, ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದವರ ಜೊತೆ, ಸಮಾಲೋಚಿಸಿದರು.

**ಶಿವಮೊಗ್ಗದಲ್ಲಿ, 74 ವರ್ಷದ ವ್ಯಕ್ತಿಯೊಬ್ಬರು,** ಝೀಕಾ ವೈರಸ್ ಸೋಂಕಿನಿಂದ ಬಳಲಿ, ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ತುತ್ತಾಗಿ, ಮೃತಪಟ್ಟಿದ್ದಾಗಿ ವರದಿಯಾಗಿದೆ.

ರಾಷ್ಟ್ರೀಯ ಸೂಕ್ಷ್ಮಾಣು ರೋಗಗಳ ವೈಜ್ಞಾನಿಕ ಅಧ್ಯಯನ ಸಂಸ್ಥೆ, ರಕ್ತದ ಮಾದರಿ ಪರೀಕ್ಷಿಸಿ, ವಯೋ ವೃದ್ಧರಲ್ಲಿ ಝೀಕಾ ವೈರಸ್ ದೃಢ ಪಡಿಸಿತ್ತು.

ಇನ್ನೊಂದೆಡೆ, ಸಾಗರದ ಯುವಕನೋರ್ವನಿಗೆ, ಝೀಕಾ ವೈರಸ್ ಸೋಂಕು ತಗುಲಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ ಎಂದು, ವರದಿಯಾಗಿದೆ.

**ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ್,** ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ, ಕ್ರಮವಾಗಿ 15 ಮತ್ತು 17 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿಯನ್ನು ಗೆದ್ದು, ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ದಕ್ಷಿಣಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ, ಮಂಗಳೂರು ನಗರದ ಕಂಕನಾಡಿಯ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ, ರಾಜ್ಯ ಟೂರ್ನಿಯಲ್ಲಿ, 2ನೇ ಅಗ್ರ ಶ್ರೇಯಾಂಕಿತೆ, ತನಿಷ್ಕಾ ತಮ್ಮ ಅಮೋಘ ಆಟದಿಂದ ಗಮನ ಸೆಳೆದರು.

**ಡಾಲ್ಫಿನ್ ಈಜು ಕೇಂದ್ರದ,** ಎಸ್.ಋಜುಲಾ, ಬೆಂಗಳೂರಿನಲ್ಲಿ ಆಯೋಜಿತ, ರಾಜ್ಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಶಿಪ್‌ನ ಬಾಲಕಿಯರ 100 ಮೀಟರ್‌ಗಳ ಫ್ರೀ ಸ್ಟೈಲ್ ವಿಭಾಗದಲ್ಲಿ, 1 ಎ ಗುಂಪಿನಲ್ಲಿ ನೂತನ ದಾಖಲೆ ಬರೆದಿದ್ದಾರೆ.

ಶನಿವಾರ ನಡೆದ ಸ್ಪರ್ಧೆಯಲ್ಲಿ ಋಜುಲಾ, 59 ದಶಾಂಶ 16 ಸೆಕೆಂದುಗಳಲ್ಲಿ ಗುರಿ ತಲುಪಿದರು.

ಬಾಲಕರ ವಿಭಾಗದ ನಾಲ್ಕನೂರು ಮೀಟರ್ ಫ್ರೀ ಸ್ಟೈಲ್ 1 ಎ ಗುಂಪಿನಲ್ಲಿ, ಬಸವನಗುಡಿ ಈಜು ಕೇಂದ್ರದ, ಎಸ್.ದರ್ಶನ್, ಪ್ರಥಮ ಸ್ಥಾನ ಗಳಿಸಿದರು.

**ಈಗ ಸಂಕ್ಷಿಪ್ತ ಸುದ್ದಿಗಳು:**

**ನಿವೃತ್ತ ನ್ಯಾಯಮೂರ್ತಿ** ಬಿ.ವೀರಪ್ಪ ಅವರು, ರಾಜ್ಯದ ನೂತನ ಉಪ ಲೋಕಾಯುಕ್ತರಾಗಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು.

**ರಾಜ್ಯ ಅರಣ್ಯ ಕೈಗಾರಿಕಾ** ನಿಗಮ ನಿಯಮಿತದಿಂದ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿ 1 ಲಕ್ಷ, 89 ಸಾವಿರದ 195 ರೂಪಾಯಿ ಮೊತ್ತದ ಚೆಕ್‌ನ್ನು, ನಿಗಮದ ಅಧ್ಯಕ್ಷ ಹಾಗೂ ಸಾಗರದ ಶಾಸಕ ಬೇಳೂರು ಗೋಪಾಲಕೃ ್ಣ ಹಸ್ತಾಂತರಿಸಿದರು.

**ಕೃಷ್ಣರಾಜ ಸಾಗರ ಭಾಗದಲ್ಲಿ,** ಟ್ರಯಲ್ ಬ್ಲಾಸ್ಟ್ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ರೈತ ಮುಖಂಡರ ಸಭೆ ನಡೆಯಿತು.

**ಚಿಕ್ಕಮಗಳೂರಿನಲ್ಲಿ** ನಿರ್ಮಾಣವಾಗುತ್ತಿರುವ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಕಾಮಗಾರಿಯನ್ನು, ಶೀಘ್ರ ಪೂರ್ಣಗೊಳಿಸುವಂತೆ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ, ಅಧಿಕಾರಿಗಳಿಗೆ ಸೂಚಿಸಿದ್ದಾರೆ.

**ಕರ್ನಾಟಕ ನಾಮಕರಣ ಸಂಭ್ರಮ 50ರ ಅಂಗವಾಗಿ,** ಜ್ಯೋತಿ ರಥ ಯಾತ್ರೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ಮಾರ್ಗವಾಗಿ, ಇದೇ 9ನೇ ತಾರೀಖು ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಲಿದೆ.

**ಹಾವೇರಿ ಜಿಲ್ಲೆಯಲ್ಲಿ ಅಡಿಕೆ, ಮಾವು,** ಶುಂಠಿ, ಹಸಿ ಮೆಣಸಿನಕಾಯಿ ಬೆಳೆಗಳಿಗೆ ವಿಮೆ ಕಂತು ಕಟ್ಟಲು, ಈ ತಿಂಗಳ 31 ಕೊನೆಯ ದಿನವಾಗಿದೆ ಎಂದು, ತೋಟಗಾರಿಕೆ ಇಲಾಖೆ ಮಾಹಿತಿ ನೀಡಿದೆ.

**ರಾಜ್ಯ ಮಾನವ ಹಕ್ಕುಗಳ ಆಯೋಗ, ಇದೇ** 9 ರಿಂದ 11ನೇ ತಾರೀಖಿನ ವರೆಗೆ, ಗದಗ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

**ಭಾರತೀಯ ವಾಯುಪಡೆಯು,** ಅಗ್ನಿಪಥ್ ಯೋಜನೆಯಡಿ, ಅಗ್ನಿವೀರ್ ವಾಯು ಸೇವೆಗಾಗಿ, ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ – agnipath vayu.cdac.in ಭೇಟಿ ನೀಡಬಹುದು.

**ರಾಜ್ಯದಲ್ಲಿ ಪಹಣಿಗಳಿಗೆ ಆಧಾರ್ ಜೋಡಣೆಯಲ್ಲಿ,** ದಾವಣಗೆರೆ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ ಎಂದು, ಜಿಲ್ಲಾಧಿಕಾರಿ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

**ಬೆಂಬಲ ಬೆಲೆ ಯೋಜನೆಯಡಿ,** ಪ್ರತಿ ಕ್ವಿಂಟಾಲ್ ಕುಸುಬಿಗೆ 5 ಸಾವಿರದ 800 ರೂಪಾಯಿ ನಿಗದಿಪಡಿಸಲಾಗಿದೆ ಎಂದು, ಗದಗ ಜಿಲ್ಲಾಧಿಕಾರಿ ವೈಶಾಲಿ ತಿಳಿಸಿದ್ದಾರೆ.

**ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ,** ಗದಗ ಜಿಲ್ಲೆಯ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರಿಗೆ ಶಿಬಿರ, ಇದೇ 8 ರಿಂದ 16ರ ವರೆಗೆ ಜರುಗಲಿದೆ.

**ಹರ್ಷ/ಉಮೇಶ/ಕೆ.ವಾ.ಇ. ಜಿಲ್ಲಾವಾರು/ಜಿಲ್ಲಾವಾರು ಪಿಟಿಸಿಗಳು/ಎಚ್.ಆರ್.ಸುಧೀಂದ್ರ/ರಾಜಶ್ರೀ**

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಕಳಸಾ–ಬಂಡೂರಿ ತಿರುವು ಯೋಜನೆ;** ಕೇಂದ್ರದ 'ಪ್ರವಾಹ್' ತಂಡ, ಇಂದು ಮಹಾದಾಯಿ ಜಲಾನಯನ ಪ್ರದೇಶಕ್ಕೆ ಭೇಟಿ.
- **ಮಹಾದಾಯಿ 'ಪ್ರವಾಹ್' ಅಧ್ಯಯನ ಸಮಿತಿಯ,** ಯೋಜನಾ ಪ್ರದೇಶದ ಭೇಟಿಗೆ, ಅನ್ಯಾರ್ಥ ಕಲ್ಪಿಸುವುದು, ಬೇಡ – ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ.
- **ಸಂಪೂರ್ಣತಾ ಅಭಿಯಾನ;** ಬೀದರ ಜಿಲ್ಲೆಯ ನಾಲ್ಕು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಅರ್ಹ ಫಲಾನುಭವಿ ಆಯ್ಕೆ ಆರಂಭ.
- **ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ,** ಖಾಸಗಿ ಹೂಡಿಕೆಗೂ, ಅವಕಾಶ – ಸಚಿವ ದಿನೇಶ್ ಗುಂಡೂರಾವ್.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>